

ಸಂತಾ, ಬಂತಾನಿಗೆ ಫೋನ್ ಮಾಡಿದ

ಸಂತಾ: ಹಲೋ ಬಂತಾ, ನನ್ನ ಮದುವೆ ಗೊತ್ತಾಯಿತು ಕಣೋ, ಮೈಸೂರಾಗ ಜೂನಲ್ಲಿ, ತಪ್ಪದೆ ಬಾ. 2ನೇ ತಾರೀಖು ಆಯಿತಾ!

ಬಂತಾ: ಒಕೆ ಒಕೆ... ಖಂಡಿತಾ ಬರ್‍ತೀನಿ ಕಣೋ.

2ನೇ ತಾರೀಖು ಬಂತಾ, ಸಂತಾನಿಗೆ ಫೋನ್ ಮಾಡಿದ.

ಬಂತಾ: ಸಂತಾ ಎಲ್ಲಿದ್ದಿಯೋ, ಹುಡುಕಿ, ಹುಡುಕಿ ಸಾಕಾಯ್ತು. ಸಿಕ್ತಾನೇ ಇಲ್ಲಾ ನೀನು?

ಸಂತಾ: ಆಶ್ಚರ್ಯದಿಂದ! ನೀನೆಲ್ಲಿದ್ದೀಯಾ ಬಂತಾ?

ಬಂತಾ: ಅರೆ ಮರ್ತೆಬಿಟ್ಟೆಯಾ? ನಿನ್ನ ಮದುವೆ ಕಣೋ, ಮೈಸೂರು 'ಜೂ'ನಲ್ಲಿ ಆಗ್ಲಿಂದ ಹುಡುಕ್ತಿದ್ದೀನಿ!

ಸಂತಾ: ಥೂ ನಿನ್ನ! ನಾನು ಹೇಳಿದ್ದು ಜೂನ್ ತಿಂಗಳಲ್ಲಿ ಅಂತಾ!

★★★

ಸಂತಾ, ಬಂತಾ, ಬೇಕರಿಗೆ ಹೋದರು.

ಸಂತಾ: ಉಪ್ಪಿನ ಬ್ರೆಡ್ ಇದೆಯಾ?

ಬೇಕರಿ ಹುಡುಗ: ಸೀದೈತೆ!

ಬಂತಾ: ದುಡ್ಡು ಕೊಟ್ಟು ಸೀದಿರೋ ಬ್ರೆಡ್ ಯಾಕೆ ತೆಗೆದುಕೊಳ್ಳಲಿ ನಾನು! ಹ್ಹಹ್ಹಹ್ಹಾ! ನಾನೀಸಲ ಮೂರ್ಖ ಆಗಲ್ಲ ಗೊತ್ತಾಯಿತಾ?

ಸಂತಾ: ಬಂತಾರನ್ನು, ಬೇಕರಿ ಹುಡುಗ ಮೇಲಿಂದ ಕೆಳಗೆ ನೋಡಿ, ನಗುತ್ತಾ. ಹೇಳಿದ ನಾನು ಹೇಳಿದ್ದು ಸೀ (ಸ್ವೀಟ್) ಬ್ರೆಡ್ ಇದೇಂತ!

★★★



ಸಂತಾ, ಬಂತಾ ನದಿಯ ದಂಡೆಯಲ್ಲಿ ಕುಳಿತಿದ್ದರು. ಪಕ್ಕದಲ್ಲಿ ಕಪ್ಪೆಯೊಂದು ಜಿಗಿಯುತ್ತಾ ಹತ್ತಿರ ಬಂದಿತು.

ಬಂತಾ ಕಪ್ಪೆಗೆ: 'ಹೇ ಕಪ್ಪೆ, ನನ್ನ ಜೊತೆ ಬರ್‍ತೀಯಾ?' ಎಂದ. ಕಪ್ಪೆ ಏನೂ ಮಾತಾಡದೆ ನೀರಿಗೆ ಜಿಗಿದು ಮುಳುಗಿತು.

ಸಂತಾ, ಬಂತಾಗೆ ಹೇಳಿದ: 'ಇಷ್ಟು ಚಿಕ್ಕ ವಿಷಯಕ್ಕೂ ಕಪ್ಪೆ ಆತ್ಮಹತ್ಯೆ ಮಾಡಿಕೊಳ್ಳೊ ಅಗತ್ಯ ಏನಿತ್ತು?

-ಇಂದು ತಿಪಟೂರು

